ನಿಯಮ 351ರ ಮೇರೆಗೆ ಚರ್ಚೆ

ಎಂ.ಆರ್.ಪಿ.ಎಲ್. ಸಂಸ್ಥೆಯಿಂದ ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪಾವತಿಯಾಗಬೇಕಾದ ಹಣ.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಅಧ್ಯಕ್ಷರೇ, ಎಂ.ಆರ್.ಪಿ.ಎಲ್. ಸಂಸ್ಥೆಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಲ್ಪಡುತ್ತಿರುವ ಘನ ಉದ್ಯಮವಾಗಿದ್ದು, ರಾಜ್ಯದ ಆರ್ಥಿಕತೆಯನ್ನು ವೃದ್ಧಿಸುವ ಸಂಸ್ಥೆಯೆಂಬ ನೆಲೆಯಲ್ಲಿ ಸರ್ಕಾರವು ಜಿಲ್ಲೆಯ ಸುಮಾರು 1335 ಎಕರೆಗಳಿಗಿಂತಲೂ ಹೆಚ್ಚಿನ ಫಲಭರಿತ ಕೃಷಿ ಭೂಮಿಯನ್ನು, ಅಲ್ಲಿನ ವಂಶಪಾರಂಪರ್ಯದಿಂದ ಕೃಷಿಯನ್ನೇ ಅವಲಂಬಿಸಿಕೊಂಡು ಬಾಳಿ ಬದುಕುತ್ತಿದ್ದ ಕೃಷಿಕ ಕುಟುಂಬಗಳನ್ನು ನಿರ್ವಸಿತರನ್ನಾಗಿಸಿ, ಅವರ ಜೀವನೋಪಾಯಕ್ಕೆ ಆಸರೆಯಾಗಿದ್ದ, ಕೃಷಿ ಭೂಮಿಯನ್ನು ಈ ಸಂಸ್ಥೆಗೆ ಸರ್ಕಾರವು ನೀಡಿ ಪ್ರೋತ್ಸಾಹಿಸಿದೆ. ಅಲ್ಲದೆ ಸಂಸ್ಥೆಯ ಸ್ಥಾಪನೆಗಾಗಿ ಸರ್ಕಾರವು, ಇತರ ಸರ್ವವಿಧದ ಸೌಲಭ್ಯಗಳನ್ನು ಒದಗಿಸಿರುತ್ತದೆಂದು ತಿಳಿಯಲಾಗಿದೆ. ಇವುಗಳಲ್ಲಿ ಪ್ರಧಾನವಾಗಿ, ನೀರು ಸರಬರಾಜು ಯೋಜನೆಯನ್ನು ಗಮನಿಸಿದಲ್ಲಿ ಅಲ್ಲಿಯೂ ಕೃಷಿಕರು ಹಾಗೂ ಇತರ ನಗರ ಮತ್ತು ಪಟ್ಟಣಗಳ ಜನತೆಯು ಅನುಭವಿಸುತ್ತಿದೆ. ಬೆಳೆಗೆ ಹಾಗೂ ಕೂಡಿಯುವ ನೀರಿನ ಸೌಕರ್ಯವನ್ನೂ ಎಂ.ಆರ್.ಪಿ.ಎಲ್. ನಿಂದಾಗಿ ಕಡಿತಗೊಳಪಟ್ಟ ಸಂಕಷ್ಟಪಡುವಂತಾಗಿದೆ. ಈ ಸಂಸ್ಥೆಯ ಬೃಹತ್ ಪ್ರಮಾಣದ ಹಾಗೂ ಭಾರೀ ಭಾರದಯಂತ್ರೋಪಕರಣಗಳ ಸಾಗಾಟದಿಂದಾಗಿ ಜಿಲ್ಲೆಯ ಮುಖ್ಯವಾಗಿ ಮಂಗಳೂರು ನಗರದ ಹಾಗೂ ಈ ಸಂಸ್ಥೆಯ ಪರಿಸರದ ರಸ್ತೆಗಳು ರಸ್ತೆಗಳಾಗಿ ಉಳಿದಿಲ್ಲ.

ಈ ಸಂಸ್ಥೆಯಿಂದ ಸ್ಥಳೀಯ ನಿವಾಸಿತರಿಗೆ ಯೋಗ್ಯ ಪುನರ್‌ವಸತಿ ಹಾಗೂ ಉದ್ಯೋಗವನ್ನು ನಿರೀಕ್ಷಿಸಲಾಗಿತ್ತಾದರೂ ಅಂತಹ ಆಸೆಗಳು ಸ್ಥಳೀಯ ಮುಗ್ಧರನ್ನು ವಂಚಿಸಿತು. ಮಂಗಳೂರು ನಗರ ಪಾಲಿಕೆಯ ಆರ್ಥಿಕ ದುಸ್ಥಿತಿಯಿಂದಾಗಿ, ನಗರಕ್ಕೆ ಅವಶ್ಯವಿರುವ ನಾಗರೀಕ ಸೌಲಭ್ಯಗಳನ್ನು ಪೂರೈಸಲು ಬಹಳ ಕಷ್ಟವಾಗಿರುವ ಸತ್ಯಸಂಗತಿಯು ಸರ್ಕಾರದ ಅರಿವಿನಲ್ಲಿದೆಯೆಂದು ನಾನು ಭಾವಿಸುತ್ತೇನೆ. ಆಕ್ಟ್ರಾಯ್ ರದ್ದತಿಗೆ ಪರ್ಯಾಯವಾಗಿ ವಸೂಲ್ಮಾಡುತ್ತಿರುವ ತೆರಿಗೆ ಮೊತ್ತವು ಸರ್ಕಾರದ ಸ್ಥಳೀಯ ಸಂಸ್ಥೆಗಳಿಗೆ ಸಮರ್ಪಕವಾಗಿ ಪೂರೈಕೆ ಆಗದೇ ಇರುವುದು ಆರ್ಥಿಕ ದುಸ್ಥಿತಿಗೆ ಕಾರಣವಾಗಿದೆಯೆಂದು ಭಾವಿಸಲಾಗಿದೆ. ನಗರದ ರಸ್ತೆಗಳು ಹದಗೆಟ್ಟು ವಾಹನ ಸಂಚಾರಕ್ಕೆ ಜನಸಂಚಾರಕ್ಕೆ ಯೋಗ್ಯವಾಗಿರುವಂತೆ ಸುಸ್ಥಿತಿಯಲ್ಲಿಡುವುದು ನಗರಪಾಲಿಕೆಗೆ ಅಸಾಧ್ಯವಾಗಿರುತ್ತದೆ. ಕೈಗಾರಿಕೆ ಬೆಳವಣಿಗೆಯಿಂದಾಗಿ ನಗರವು ದಿನೇ ದಿನೇ ಬೆಳೆಯುತ್ತಿದ್ದು, ನಾಗರೀಕರ ಅವಶ್ಯಕತೆಗಳಾದ ನೀರು ಪೂರೈಕೆ ಒಳಚರಂಡಿ ವ್ಯವಸ್ಥೆ, ಆರೋಗ್ಯ ಸಂರಕ್ಷಣೆ ಮುಂತಾದವುಗಳನ್ನು ವ್ಯವಸ್ಥಿತವಾಗಿ ಮಾಡಲಾರದಂಥ ಪರಿಸ್ಥಿತಿ ನಗರ ಪಾಲಿಕೆಯಲ್ಲಿದೆ. ಸಾರಿಗೆ ಸಂಚಾರವನ್ನು ಸಕ್ರಮಗೊಳಿಸಲು ರಸ್ತೆಗಳನ್ನು, ಅಗಲಗೊಳಿಸಿ, ವಾಹನಗಳಿಗೆ ಹಾಗೂ ಪಾದಚಾರಿಗಳು ಸಂಚರಿಸಲು ವ್ಯವಸ್ಥೆಗೊಳಿಸಿ, ನಗರದ ನೈರ್ಮಲ್ಯವನ್ನು ಕಾಪಾಡುವ ಅಗತ್ಯವು, ಅವಶ್ಯಕತೆಗನುಗುಣವಾಗಿ ನಿಭಾಯಿಸಲು ಹಣಕಾಸಿನ ಕೊರತೆಯು ಕಾರಣವಾಗಿದೆ. ವಾಸ್ತವಿಕತೆ ಹೀಗಿರುವುದರಿಂದ, ನಗರ ಪಾಲಿಕೆಯು ತೆರಿಗೆಗಳನ್ನು ಏರಿಸಿ, ಹೆಚ್ಚಿನ ಮೊಬಲಗನ್ನು ಕ್ರೋಢೀಕರಿಸುವ ಕ್ರಮ ಕೈಗೊಂಡು, ಜನಸಾಮಾನ್ಯರಾದ, ನಾಗರೀಕರಿಗೆ ಆರ್ಥಿಕ ಸಂಕಷ್ಟವನ್ನುಂಟುಮಾಡಿರುವ ಸಂದರ್ಭದಲ್ಲಿ, ತನಗೆ ಬರಬೇಕಾಗಿರುವ ಬೃಹತ್ ಪ್ರಮಾಣದ, ಕಾಯ್ದಿರಿಸಲಾದ ಮೊತ್ತವನ್ನು ಇದುವರೆಗೂ ವಸೂಲಿ ಮಾಡದೇ, ಬೃಹತ್ ಕೈಗಾರಿಕೆಗಳನ್ನು ಬೆಂಬಲಿಸುವುದು ವಿಪರ್ಯಾಸವಾಗಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರದವರು ಎಂ.ಆರ್.ಪಿ.ಎಲ್.ನವರಿಂದ, ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪಾವತಿಯಾಗತಕ್ಕ ಸುಮಾರು 18.16 ಕೋಟಿ ರೂಪಾಯಿಗಳ ಬೃಹತ್ ಪ್ರಮಾಣದ

ಮೊತ್ತವನ್ನು ವಸೂಲಿ ಮಾಡದೇ, ಆ ಸಂಸ್ಥೆಗೆ ರಿಯಾಯಿತಿ ನೀಡಲು ಆಲೋಚಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿದೆ. ಈಬಾಕಿ ಮೊತ್ತವನ್ನು ಸಂಸ್ಥೆಯಿಂದ ಕೂಡಲೇ ವಸೂಲಿ ಮಾಡಲು ಕ್ರಮ ಕೈಗೊಂಡರೆ, ಮಂಗಳೂರು ನಗರ ಪಾಲಿಕೆಯು ಜನೋಪಯೋಗಿ ಕಾರ್ಯಗಳನ್ನು ಶೀಘ್ರವೇ ಕಾರ್ಯಗತ ಮಾಡಲು ಸಾಧ್ಯವಾಗುವುದು ಎಂಬುದನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮಂಗಳೂರು ಎಂ.ಆರ್.ಪಿ.ಎಲ್. ಏನಿದೆ, ಇದು ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ, ಕೇಂದ್ರ ಸರ್ಕಾರದ ಹೆಚ್.ಪಿ.ಸಿ.ಎಲ್. ಮತ್ತು Indian Rayon ಕಂಪನಿಯವರ joint sector ಸಾಧಾರಣ ಮೂರು ಎಂ.ಟಿ.ಆರ್. ಮಿಲಿಯನ್ ಟನ್ಸ್ ಆಯಿಲ್ ಮತ್ತು 45 ಮೆಗಾವ್ಯಾಟ್ಸ್ ಪವರ್ ಜನರೇಟ್ ಮಾಡುತ್ತಿದ್ದಾರೆ. ಸರ್ಕಾರದಿಂದ ಇವರಿಗೆ 1,823.38 ಎಕರೆಯನ್ನು ಈಗಾಗಲೇ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಮುಖಾಂತರ ಜಮೀನು ಕೊಟ್ಟು, ಯಾರ ಕಡೆಯಿಂದ ಜಮೀನು ತೆಗೆದುಕೊಂಡಿದ್ದೇವೆ, ಅವರಿಗೆ ಪರಿಹಾರವನ್ನೂ ಕೊಡಲಾಗಿದೆ. ಇನ್ನೊಂದು 69 ಎಕರೆ ಭೂಮಿ ಕೊಡಬೇಕಾಗಿದೆ. ಅದಕ್ಕೆ ಫೈನಲ್ ಅವಾರ್ಡ್ ಈ ತಿಂಗಳೊಳಗಾಗಿ ಆಗುತ್ತದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಮುಖ್ಯವಾಗಿ, ಪುನರ್ ವಸತಿ ವಿಚಾರದಲ್ಲಿ 91 ಎಕರೆಯಲ್ಲಿ ಎಂ.ಆರ್.ಪಿ.ಎಲ್.ನವರು ಮಾಡಿದ್ದಾರೆ. ಇದಕ್ಕಾಗಿ ಸಾಧಾರಣ 4 ಕೋಟಿ 23 ಲಕ್ಷ ಈಗಾಗಲೇ ಅವರು ಖರ್ಚು ಮಾಡಿದ್ದಾರೆ. ಕುಡಿಯುವ ನೀರಿನ ವಿಚಾರದಲ್ಲಿ ಕರ್ನಾಟಕ ಪವರ್ ಕಾರ್ಪೊರೇಷನ್ ಮುಖಾಂತರ, ಅಲ್ಲಿ ವಾಟರ್ ಸಪ್ಲೈ ಮಾಡಲಿಕ್ಕೆ ಮಲ್ಟಿ ಪರ್‌ಪೊಸ್ ಬ್ಯಾರೇಜ್ ಕಟ್ಟಬೇಕಾಗಿತ್ತು. ಅದು ಸ್ವಲ್ಪ ವಿಳಂಬವಾಗಿದೆ. ಹಾಗಾಗಿ ಎಂ.ಆರ್.ಪಿ.ಎಲ್. ಸ್ವತಃ ಅವರ ಖರ್ಚಿನಿಂದ ಕುಡಿಯುವ ನೀರಿನ ಯೋಜನೆಗಾಗಿ, ನೇತ್ರಾವತಿ ನದಿಯಿಂದ ತಾತ್ಕಾಲಿಕ ವ್ಯವಸ್ಥೆ ಮಾಡಿದ್ದಾರೆ. ನಾವು ಅವರ ಬಗ್ಗೆ ಸೂಕ್ತವಾದ ನಿರ್ದೇಶನ ಕೊಟ್ಟಿದ್ದೇವೆ. ಮಂಗಳೂರು ಪಟ್ಟಣಕ್ಕೆ ಮತ್ತು ಸುತ್ತಮುತ್ತಲಿನ ಹಳ್ಳಿಗಳಿಗೆ ನೀರು ಕೊಟ್ಟು, ಉಳಿದ ನೀರನ್ನು ಬಿ.ಎಸ್. ಕಂಪನಿಗೆ ಕೊಡಬೇಕೆಂದು ಈಗಾಗಲೇ ಆದೇಶ ಕೊಟ್ಟಿದ್ದೇವೆ. ರಸ್ತೆ ವಿಚಾರದಲ್ಲಿ ಅವರು ಹೇಳಿದಹಾಗೆ, ಸಾಮಾನ್ಯವಾಗಿ ನಾನು ಹೋದಾಗ ನೋಡಿದ್ದೇನೆ. ರಸ್ತೆ ಪರಿಸ್ಥಿತಿ ಸರಿಯಿಲ್ಲ, ಅದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳಲಾಗುವುದು. ಮತ್ತು ಎಂ.ಆರ್.ಪಿ.ಎಲ್.ನವರು ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಏನು ಹಣ ಕೊಡಬೇಕಾಗಿದೆ, ಎಂ.ಆರ್.ಪಿ.ಎಲ್. ಮತ್ತು ಸರ್ಕಾರದಲ್ಲಿ ಸ್ವಲ್ಪ ವಾದ ವಿವಾದ ಇದೆ. ಅವರು ಹೇಳುತ್ತಾರೆ, ಇವರು ನಮ್ಮ ಏರಿಯಾದಲ್ಲಿ ಡೆವಲಪ್‌ಮೆಂಟೇ ಮಾಡಿಲ್ಲ, ಇವರು ಏಕೆ ಹಣ ಕೇಳುತ್ತಾರೆ ಎಂದು. ಆ ಬಗ್ಗೆ ಒಂದು ಸಭೆಯನ್ನು ನಾವು ಮಾಡಿದ್ದೇವೆ, ವಸತಿ ಇಲಾಖೆ ಮತ್ತು ಕೈಗಾರಿಕೆ ಇಲಾಖೆವತಿಯಿಂದ ಸಭೆ ನಡೆದು ಆದಷ್ಟು ಬೇಗನೆ ಇದರ ಬಗ್ಗೆ ತೀರ್ಮಾನವಾಗುತ್ತದೆ. ಕಾಯಿದೆಯಂತೆ ಅವರ ಕಡೆಯಿಂದ ಏನು ಹಣ ವಸೂಲ್ಮಾಡಬೇಕೋ ಅದನ್ನು ವಸೂಲ್ಮಾಡಿ ಅಲ್ಲೇನು ಅಭಿವೃದ್ಧಿಯಾಗಬೇಕು, ಸರ್ಕಾರ ಮತ್ತು ಎಂ.ಆರ್.ಪಿ.ಎಲ್.ನಿಂದ ಆದಷ್ಟು ಬೇಗನೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಅದೇ ಪ್ರಕಾರ ಉದ್ಯೋಗಾವಕಾಶದ ವಿಚಾರದಲ್ಲಿ, ತಮಗೆ ಗೊತ್ತು ದೊಡ್ಡ ಕೈಗಾರಿಕೆಯಲ್ಲಿ ಹೆಚ್ಚಿನ ಉದ್ಯೋಗಾವಕಾಶ ಆಗದೇ ಇದ್ದರೂ ಸಹ ಅದರಿಂದ ಏನು Downstream industries ಬರುತ್ತದೆ, ಅಥವಾ ancilliary industries ಬರುತ್ತವೆ. ಅದರ ಮುಖಾಂತರ ಉದ್ಯೋಗಾವಕಾಶ ಕೊಡುವುದಕ್ಕೆ ಸಾಧ್ಯ. ಈಗಾಗಲೇ ನಾವು ಆಜ್ಞೆ ಹೊರಡಿಸಿದ್ದೇವೆ. ಸ್ಥಳೀಯ ಜನರಿಗೆ ಉದ್ಯೋಗಾವಕಾಶ ಕೊಡಬೇಕು ಎಂದು. ಆ ಪ್ರಕಾರವೇ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.